**ಓ. ಎಸ್- 45**/2019
ಪಿಡಿ ಡಬ್ಲೂ-1

ಇಂದು ದಿಃ 27**-02-2024** ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿಗಳ ಪರ ವಕೀಲರಾದ ಶ್ರೀ ಎಂ.ಆ ರ್.ಎಂ.ಹೆಚ್ ವಕೀಲರಿಂದಃ**

6 ನೇ ಪ್ರತಿವಾದಿಗೆ ಎಷ್ಟು ಜನ ಸಹೋದರರು ಇದ್ದಾರೆಂದು ನನಗೆ ಗೊತ್ತಿಲ್ಲ. 6 ನೇ ಪ್ರತಿವಾದಿ ಯಾರಿಂದ ಖರೀದಿ ಮಾಡಿದ್ದಾನೆಂದು ನನಗೆ ಗೊತ್ತಿಲ್ಲ. 6 ನೇ ಪ್ರತಿವಾದಿಯ ತಂದೆ ಹೆಸರು ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಎ ಆಸ್ತಿಯನ್ನು ಒಟ್ಟು ಕುಟುಂಬದಲ್ಲಿ ಖರೀದಿ ಮಾಡಿದ್ದರು. ನಮ್ಮ ಅಜ್ಜ ಖರೀದಿಸಿ ಅವನ ಸಹೋದರ ಮರಿಬಸಪ್ಪನ ಹೆಸರಿಗೆ ಮಾಡಿಸಿದ್ದಾರೆ. 1962-63 ರಲ್ಲಿ ಮಾಡಿಸಿದ್ದಾರೆ ಆಗ ನನಗೆ ವಯಸ್ಸು 22 ವರ್ಷ , ಈಗ ನನ್ನ ವಯಸ್ಸು 67 ವರ್ಷ ಆಗಿರುತ್ತದೆ. ದಾವಾ ಎ ಷೆಡ್ಯಾಲ್ ಆಸ್ತಿಯನ್ನು ಒಟ್ಟು ಕುಟುಂಬದಲ್ಲಿ ಖರೀದಿಸಿದ್ದೇವೆಂದು ದಾಖಲೆಯನ್ನು ಹಾಜರು ಪಡಿಸಿದ್ದೇವೆ. ಸಾಕ್ಷಿಗೆ ಯಾವ ದಾಖಲೆಗಳನ್ನು ಹಾಜರು ಪಡಿಸಿದ್ದೇವೆಂದು ದಾಖಲೆಗಳನ್ನು ತೋರಿಸಿದಲ್ಲಿ ನಾನು ಶಾಲೆ ಕಲಿತಿರುವುದಿಲ್ಲ ನನಗೆ ಓದಲು ಬರುವುದಿಲ್ಲ ಎಂದು ನುಡಿದಿರುತ್ತಾರೆ. ನಮ್ಮ ದೊಡ್ಡಪ್ಪ ಹೆಸರಿಗೆ ಒಟ್ಟು ಕುಟುಂಬದಲ್ಲಿ ಖರೀದಿ ಮಾಡಿದ್ದೇವೆಂದು ದಾಖಲೆಗಳನ್ನು ಹಾಜರು ಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸರ್ವೇ ನಂಃ 22/02 ರಲ್ಲಿ 1 ಎಕೆರ ಜಮೀನು 6 ನೇ ಪ್ರತಿವಾದಿಯ ಹೆಸರಿನಲ್ಲಿದೆ. ಶಿವಮ್ಮ ಡಿ. ಜಿ ಎಂದರೆ ನನ್ನ ಸಹೋದರಿ. ಆಕೆಯ ಹೆಸರಲ್ಲಿ 1 ಎಕರೆ 24 ಗುಂಟೆ ಜಮೀನು ಹೇಗೆ ಬಂದಿದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ನಮ್ಮ ತಂದೆಯು ಮೃತ ಪಟ್ಟ ನಂತರ ಅವರ ಹೆಸರಿಗೆ ಪೌತಿ ಆಧಾರದ ಮೇಲೆ ಮಾಡಿಸಿಕೊಂಡಿದ್ದಾರೆ. ನಾನು ಆ ಬಗ್ಗೆ ದಾಖಲೆಗಳನ್ನು ವಕೀಲರಿಗೆ ಕೊಟ್ಟಿದ್ದೇನೆ. ಸರ್ವೇ ನಂ. 22/2 ರಲ್ಲಿ ಒಟ್ಟು ಕ್ಷೇತ್ರ 4 ಎಕರೆ 24 ಗುಂಟೆ ಜಮೀನು ಇದ್ದು , ನನ್ನ ತಂದೆಯ ಸಹೋದರಿ ಯಾವಾಗ ಮೃತ ಪಟ್ಟಿದ್ದಾರೆಂದು ನನಗೆ ದಿನಾಂಕ ಹೇಳಲು ಬರುವುದಿಲ್ಲ. ನನ್ನ ತಂದೆಯ ಸಹೋದರ ಮರಿ ಬಸಪ್ಪನಿಗೆ ಮದುವೆಯಾಗಿರಲಿಲ್ಲ. ನಮ್ಮ ದೊಡ್ಡಪ್ಪ ಮರಿಬಸಪ್ಪ ಸೊಸೈಟಿಯಲ್ಲಿ ಅಕ್ಕಿ ಸಕ್ಕರೆ ತೂಗಿ ಕೊಡಲು ಹೋಗುತ್ತಿದ್ದ. ಮರಿಬಸಪ್ಪ ಸುಮಾರು 30 ವರ್ಷಗಳವರೆ ಸೊಸೈಟಿಯ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದರು ಎನ್ನುವುದು ಸರಿಯಲ್ಲ. ಸರ್ವೇ ನಂ. 22/2 ಯಾವಾಗ ಖರೀದಿ ಮಾಡಿದ್ದೇವೆಂದು ನನಗೆ ನೆನಪಿಲ್ಲ. ಮರಿಬಸಪ್ಪ ನ ಸಹೋದರ ಸಹೋದರಿಯು ಡಿ ಬಸಪ್ಪ ಮತ್ತು ಕೊಟ್ರಪ್ಪ ಮತ್ತು ಬಸಮ್ಮ ಎನ್ನುವವರು ಇದ್ದರು. ಬಸಮ್ಮ ಎನ್ನುವವರಿಗೆ ನ್ಯಾಮತಿಗೆ ಮದುವೆ ಮಾಡಿಕೊಟ್ಟಿದ್ದು , ಆಕೆಗೆ ಮಕ್ಕಳಿರುವುದಿಲ್ಲ . ನಮ್ಮ ಅಜ್ಜನ ಹೆಸರು ಬಸಲಿಂಗಪ್ಪ . ನಮ್ಮ ಅಜ್ಜನಿಂದ ಸರ್ವೇ ನಂಃ 22 ರಲ್ಲಿ 4 ಎಕರೆ 24 ಗುಂಟೆ , ನಮ್ಮ ಅಜ್ಜ ಯಾವಗ ಮೃತ ಪಟ್ಟಿದ್ದಾರೆಂದು ನನಗೆ ನೆನಪಿಲ್ಲ. ನಮ್ಮ ಅಜ್ಜನಿಗೆ ಸರ್ವೇ ನಂಃ 71 ರಲ್ಲಿ 2 ಎಕರೆ 20 ಗುಂಟೆ ಜಮೀನು ಇತ್ತು. ಸರ್ವೇ ನಂಃ 71 ಪಟೇಲ್ ಕಿ ಜಮೀನಾಗಿದ್ದು ನಮ್ಮ ತಂದೆಯ ಹೆಸರಿಗೆ ಮಂಜೂರಾಗಿರುತ್ತದೆ. 2 ಆಸ್ತಿಗಳನ್ನು

ಹೊರತು ಪಡಿಸಿ , 2 ಖಣ , 2 ಮನೆಗಳಿದ್ದವು. ನಮ್ಮ ತಂದೆ ಆತನ ಸಹೋದರರಾದ ಮರಿಬಸಪ್ಪ ಕೊಟ್ರಪ್ಪ ಎನ್ನುವವರು ತಮ್ಮ ಜೀವಿತಾವಧಿಯಲ್ಲಿಯೇ ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ವಾಸ ಮಾಡಿಕೊಂಡಿರುತ್ತಾರೆ ಎನ್ನುವುದು ಸರಿಯಲ್ಲ. ಮರಿಬಸಪ್ಪ ಎನ್ನುವವರು ಮೊದಲು ಸೊಸೈಟಿಯಲ್ಲಿ ಕಾರ್ಮಿಕನಾಗಿ ನಂತರ ಅಧ್ಯಕ್ಷನಾಗಿ ಕೆಲಸ ಮಾಡಿದ್ದಾನೆಂದರೆ ಸರಿಯಲ್ಲ. ಅವನ ದುಡಿಮೆಯಿಂದ ಸಾಕಷ್ಟು ಆಸ್ತಿಗಳನ್ನು ಖರೀದಿ ಮಾಡಿದ್ದ ಎಂದರೆ ಸರಿಯಲ್ಲ. ನನ್ನ ಮದುವೆ 30 ವರ್ಷಗಳ ಹಿಂದೆ ಆಗಿರುತ್ತದೆ. ರಾಣೇಬೆನ್ನೂರು ತಾ ಅಸುಂಡಿ ಗ್ರಾಮ ದಲ್ಲಿ ಒಂದು ದಿನ ಆರತಿಕೋಸ್ಕರ ಹೋಗಿದ್ದೆ. ನಮ್ಮ ಮಾವ ದೊಡ್ಡ ಶ್ರೀಮಂತರು ಎನ್ನುವುದು ಸರಿಯಲ್ಲ. ನಾನು ನಮ್ಮ ಮಾವನ ಮನೆತನವನ್ನು ನೋಡಿಕೊಳ್ಳಲು ಹೋಗಿದ್ದೆನು ಎನ್ನುವುದು ಸರಿಯಲ್ಲ. ನಮ್ಮ ತಂದೆ ಯಾವ ಯಾವ ಆಸ್ತಿಗಳನ್ನು ಖರೀದಿಸಿದ್ದರು ಮತ್ತು ಮಾರಾಟ ಮಾಡಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಅದೇ ರೀತಿ ಮರಿಬಸಪ್ಪ ಎನ್ನುವವರು ಎಷ್ಟು ಆಸ್ತಿಗಳನ್ನು ಖರೀದಿಸಿದ್ದಾರೆ ಹಾಗೂ ಮಾರಾಟ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ನನ್ನ ವಾದಿ ಪತ್ರದಲ್ಲಿ ಸರ್ವೇ ನಂಃ 22/2 ರಲ್ಲಿ ನಮ್ಮ ತಂದೆ ಮತ್ತು ಆತನ ಸಹೋದರರು ಒಟ್ಟು ಕುಟುಂಬದಲ್ಲಿ ದುಡಿದು ಖರೀದಿಸಿದ್ದಾರೆಂದು ಬರೆಸಿದ್ದೇನೆ. ಎಷ್ಟು ವರ್ಷಗಳ ಹಿಂದೆ ಖರೀದಿ ಮಾಡಿದ್ದೆನೆಂದು , ಸರ್ವೇ ನಂ. 22 ನ್ನು ಜಂಬಯ್ಯ ಎನ್ನುವವರಿಂದ ಖರೀದಿ ಮಾಡಿದ್ದೇನೆ. ಆ ರೀತಿ ನಾನು ಹಾಜರು ಪಡಿಸಿದ ದಾಖಲೆಗಳಲ್ಲಿ ಇರುವುದಿಲ್ಲ ಎನ್ನುವುದು ಸರಿಯಲ್ಲ. ಒಟ್ಟು ಕುಟುಂಬದಲ್ಲಿ ಖರೀದಿಸಿದ್ದೇವೆಂದು ಉದ್ದೇಶ ಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆಂದರ ಸರಿಯಲ್ಲ. ಜಂಬಯ್ಯ ನಿಂದ ಖರೀದಿಸಿದ್ದಾರೆಂದು ಓದಿಸಿ ತಿಳಿದುಕೊಂಡಿದ್ದೇನೆ. ಅದಕ್ಕೆ ಆ ಪತ್ರಕ್ಕೆ ಯಾರು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆಂದು ಗೊತ್ತಿಲ್ಲ. ಸರ್ವೇ ನಂಃ 22 ಕ್ಕೆ ಸಂಬಂಧ ಪಟ್ಟ ಮ್ಯುಟೇಷನ್ ಪ್ರತಿಯನ್ನು ಹಾಜರು ಪಡಿಸಿಲ್ಲ ಎನ್ನುವುದು ಸರಿಯಲ್ಲ. ಶಿವಮ್ಮನಿಗೆ ನಿಶಾನೆ ಪಿ 5 ರಲ್ಲಿರುವ ಮನೆ ಯಾವ ರೀತಿಯಾಗಿ ಬಂದಿದೆ ಎಂದು ಗೊತ್ತಿಲ್ಲ. ನಮ್ಮ ತಂದೆಯ ಮರಣ ಪ್ರಮಾಣ ಪತ್ರವನ್ನು ತೆಗೆಸಿಕೊಂಡು ಮಾಡಿಸಿರುತ್ತಾರೆ. ನಿಪಿ. 5 ದಾಖಲೆಯ ಬಗ್ಗೆ ಪಹಣಿ ಪತ್ರಿಕೆಯನ್ನು ತೆಗೆಸಲು ಹೋದಾಗ ತಹಶೀಲ್ದಾರರ ಕಛೇರಿಯಲ್ಲಿ ಗೊತ್ತಾಗಿರುತ್ತದೆ. ಪೌತಿ ಖಾತೆ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 2019 ರಲ್ಲಿ ದಾಖಲೆಗಳನ್ನು ತೆಗೆಸಿದ್ದೇನೆ. 3 ನೇ ಪ್ರತಿವಾದಿಯ ಮದುವೆ ಯಾವಾಗ ಆಗಿದೆ ಎಂದು ನನಗೆ ನೆನಪಿಲ್ಲ. ಎಷ್ಟು ವರ್ಷಗಳ ಹಿಂದೆ ಆಗಿದೆ ಎಂದು ನನಗೆ ನೆನಪಿಲ್ಲ. ಗದಿಗೆಮ್ಮನ ಮದುವೆ ಯಾವಾಗ ಆಗಿದೆ ಎಂದು ನೆನಪಿಲ್ಲ. ಗದಿಗೆಮ್ಮನ ಮಗಳ ಹೆಸರು ನಾಗಮ್ಮ . ನಾಗಮ್ಮ ನನ್ನು 1 ನೇ ಪ್ರತಿವಾದಿಗೆ ಕೊಟ್ಟು ಮದುವೆ ಮಾಡಿದ್ದಾರೆ. 3 ನೇ ಪ್ರತಿವಾದಿಯನ್ನು ಕಾರಿಗನೂರು ಗ್ರಾಮಕ್ಕೆ ಕೊಟ್ಟು ಮದುವೆ ಮಾಡಿದ್ದಾರೆ. ಶಿವಮ್ಮ ಮತುತ ಗದಿಗೆಮ್ಮನ ಮದುವೆಯನ್ನು ಒಟ್ಟು ಕುಟುಂಬದಲ್ಲಿದ್ದಾಗೆ ಮಾಡಿದ್ದೇವೆ. 3 ನೇ ಪ್ರತಿವಾದಿಗೆ ಮದುವೆಯ ಕಾಲಕ್ಕೆ 5 ತೊಲೆ ಬಂಗಾರ 50 ಸಾವಿರ ನಗದು ಹಣ ಕೊಟ್ಟಿರುತ್ತದೆ. ಗದಿಗೆಮ್ಮನ ಮದುವೆ ಕಾಲಕ್ಕೆ ಬಟ್ಟೆ ಬಂಗಾರ ಕೊಟ್ಟಿರುತ್ತದೆ. ಆ ರೀತಿ

ವಾದ ಪತ್ರದಲ್ಲಿ ಹೇಳಿ ಬರೆಸಿದ್ದೇನೆ. ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ಖಾಯಲೆಯಾಗಿದ್ದರಿಂದ ನಮ್ಮ ತಂದೆ ಆಕೆಯನ್ನು ಮನೆಗೆ ಕರೆದುಕೊಂಡು ಬಂದಿದ್ದರು, 3 ನೇ ಪ್ರತಿವಾದಿಯ ಗಂಡನ ಹೆಸರು ಸಣ್ಣಪ್ಪ. 3 ನೇ ಪ್ರತಿವಾದಿ ಮತ್ತು ಆಕೆಯ ಮಕ್ಕಳನ್ನು ಸಣ್ಣಪ್ಪ ಮನೆಯಿಂದ ಹೊರಗೆ ಹಾಕಿದ್ದಾನೆಂದರೆ ಸರಿಯಲ್ಲ. ಶಿವಮ್ಮ ಮತ್ತು ಸಣ್ಣಪ್ಪನ ಮಧ್ಯೆದಲ್ಲಿ ಹರಿಹರ ನ್ಯಾಯಾಲಯದಲ್ಲಿ ಕ್ರಿಮಿನಲ್ ಹಾಗೂ ಜೀವನಾಂಶ ಪ್ರಕರಣ ನಡೆದ ಬಗ್ಗೆ ನನಗೆ ಗೊತ್ತಿಲ್ಲ. ಸಣ್ಣಪ್ಪ ಜೀವನಾಂಶ ಕೊಟ್ಟಿರುವುದಿಲ್ಲ ಎಂದು ಆತನನ್ನು ಜೈಲಿಗೆ ಹಾಕಿದ್ದ ಬಗ್ಗೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಯನ್ನು ನಮ್ಮ ತಂದೆ ನ್ಯಾಯಾಲಯಕ್ಕೆ ಕರೆದುಕೊಂಡು ಬರುವಂತೆ ನಾನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುವುದಿಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

SD/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.

ಮುಂದುವರೆದ ಮುಖ್ಯ ವಿಚಾರಣೆಗೆ ವಾದಿ ಪರ ವಕೀಲರು ಸಮಯಕೋರಿದ್ದಾರೆ.

ಅರ್ಜಿಯಲ್ಲಿ ಕೇಳಿದಂತೆ ನನ್ನ ಪರ ಆದೇಶ ಮಾಡಬೇಕೆಂದು ಪ್ರಾರ್ಥನೆ.

ಪಾರ್ಟೀ ಸವಾಲನ್ನು ವಾದಿಗಳ ಪರ ವಕೀಲರ ಕೋರಿಕೆಯ ಮೇರಗೆ ಮುಂದೂಡಲಾಯಿತು.

ಮುಖ್ಯ ವಿಚಾರಣೆಯನ್ನು ಅರ್ಜಿದಾರರ ಪರ ವಕೀಲರ ಕೋರಿಕೆಯ ಮೇರಗೆ ಮುಂದೂಡಲಾಯಿತು.

ಆದ್ದರಿಂದ ದಾವೆಯಲ್ಲಿ ಕೇಳಿದಂತೆ ನನ್ನ ಪರ ಡಿಕ್ರಿ ಮಾಡಬೇಕೆಂದು ಪ್ರಾರ್ಥನೆ ಅರ್ಜಿಯಲ್ಲಿ ಕೇಳಿದಂತೆ ನನ್ನ ಪರ ಆದೇಶ ಮಾಡಬೇಕೆಂದು ಪ್ರಾರ್ಥನೆಗಳು.